ಕರ್ನಾಟಕ ಸರ್ಕಾರ
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 09, 2020**

# ಪತ್ರಿಕಾ ಆಮಂತ್ರಣ

**ಬೀಳ್ಕೊಡುಗೆ ಸಮಾರಂಭ**

ಕರ್ನಾಟಕ ವಿಧಾನ ಪರಿಷತ್ತಿನ ಜೂನ್ 2020ರ ಮಾಹೆಯಲ್ಲಿ ನಿವೃತ್ತಿ ಹೊಂದಿರುವ 16 ಶಾಸಕರಿಗೆ

ಅಧ್ಯಕ್ಷತೆ: ಮಾನ್ಯ ಸಭಾಪತಿಗಳು

ದಿನಾಂಕ: 10–07–2020, ಸಮಯ: ಬೆಳಿಗ್ಗೆ 10–30 ಗಂಟೆಗೆ

ಸ್ಥಳ: ಸಮ್ಮೇಳನಾ ಸಭಾಂಗಣ ಕೊಠಡಿ ಸಂಖ್ಯೆ– 334, ಮೂರನೇ ಮಹಡಿ, ವಿಧಾನಸೌಧ

# ಪತ್ರಿಕಾ ಪ್ರಕಟಣೆ

## 12 ಕೋಟಿ ರೂ.ವೆಚ್ಚದಲ್ಲಿ ಸಮಾಲೋಚಕರ ನೇಮಕ : ಸಚಿವ ಜೆ.ಸಿ.ಮಾಧುಸ್ವಾಮಿ

ಬೆಂಗಳೂರು, ಜುಲೈ 9 (ಕರ್ನಾಟಕ ವಾರ್ತೆ): ಕರ್ನಾಟಕದಲ್ಲಿ ಹೂಡಿಕೆದಾರರನ್ನು ಉತ್ತೇಜಿಸುವ ಸಲುವಾಗಿ ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್ ಆಫ್ ಇಂಡಿಯಾ ಪ್ರೈವೇಟ್ ಕಂಪನಿಯನ್ನು 12 ಕೋಟಿ ವೆಚ್ಚದಲ್ಲಿ 12 ತಿಂಗಳ ಅವಧಿಗೆ ಸಮಾಲೋಚಕರನ್ನಾಗಿ ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ಸಣ್ಣ ನೀರಾವರಿ ಸಚಿವರಾದ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಅವರು ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಚಿವ ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕಂಪನಿಗೆ 12 ಕೋಟಿಯ ಜೊತೆಗೆ ಜಿಎಸ್‌ಟಿ ನೀಡಲಾಗುವುದು. ಅವರು 12 ತಿಂಗಳಲ್ಲಿ ನಮ್ಮ ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರನ್ನು ಉದ್ದಿಮೆಗೆ ಕರೆತರಬೇಕು ಎನ್ನುವ ಉದ್ದೇಶದಿಂದ ನೇಮಕ ಮಾಡಲಾಗಿದೆ ಎಂದರು.

ಇ ಆಡಳಿತದಲ್ಲಿ ಇ ಸಂಗ್ರಹಣಾಯ ಎರಡು ಯೋಜನೆಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಮೆ: ಇಐಟಿ ಸರ್ವೀಸಸ್ ಇಂಡಿಯಾ ಲಿಮಿಟೆಡ್ ಇವರಿಗೆ 184.37 ಕೋಟಿ ನೀಡಲಾಗಿದೆ ಎಂದರು.

ಐದು ವಿದ್ಯುತ್ ಕಂಪನಿಗಳಿಗೆ 2500 ಕೋಟಿ ರೂ.ಗಳ ಬಡ್ಡಿ ರಹಿತ ಸಾಲ ಮಂಜೂರು ಮಾಡಲಾಗಿದೆ. ಇದರಲ್ಲಿ ಬೆಂಗಳೂರು ವಿದ್ಯುತ್ ಕಂಪನಿಗೆ 500, ಹುಬ್ಬಳ್ಳಿ 400, ಗುಲ್ಬರ್ಗ 1000, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ 600 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ

ವಾಣಿಜ್ಯ ಮತ್ತು ಕೈಗಾರಿಕಾ ಆಡಳಿತ ವ್ಯಾಪ್ತಿಯಲ್ಲಿದ್ದ ಕವಿಕ ಮತ್ತು ಎಮ್‌ಎಐ ಎಲೆಕ್ಟ್ರಿಕ್ ಕಂಪನಿ ಆಡಳಿತವನ್ನು ಇಂಧನ ಇಲಾಖೆಯ ವ್ಯಾಪ್ತಿಗೆ ತರಲು ತೀರ್ಮಾನಿಸಲಾಯಿತು ಎಂದರು.

ಸಾದಿಲ್ವಾರು ಬಿಲ್ಲಿನಲ್ಲಿ 80 ಕೋಟಿ ವರೆಗೆ ಖರ್ಚು ಮಾಡಲು ಅವಕಾಶವಿತ್ತು. ಈಗ ಕೋವಿಡ್–19 ರಿಂದ ಕೆಲವು ವರ್ಗದ ಜನರಿಗೆ ತಕ್ಷಣ ಪರಿಹಾರ ಒದಗಿಸುವ ಉದ್ದೇಶದಿಂದ ಸಾದಿಲ್ವಾರು ನಿಧಿ ಮೊತ್ತವನ್ನು ಒಂದು ಬಾರಿಗೆ 500 ಕೋಟಿ ವರೆಗೆ ವೆಚ್ಚ ಮಾಡಲು ತೀರ್ಮಾನಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳ ಖರೀದಿಗೆ 81.99 ಕೋಟಿ ಮೊತ್ತಕ್ಕೆ ಒಪ್ಪಿಗೆ ನೀಡಲಾಗಿದೆ ಅಲ್ಲದೆ, ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಿಗೆ ವೈದ್ಯಕೀಯ ಅನಿಲ ಪೈಪ್ ಲೈನ್ ಜೊತೆಗೆ ಅತಿ ವೇಗದ ಆಮ್ಲಜನಕ ಉಪಕರಣ ಅಳವಡಿಸಲು ಹಾಗೂ ತುರ್ತು ಹಾಸಿಗೆಗಳಿಗಾಗಿ ಸರ್ಕಾರದ ವತಿಯಿಂದ 207 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ ಎಂದರು

ವಿಜಯಪುರದಲ್ಲಿ ಏರ್‌ಪೋರ್ಟ್ ನಿರ್ಮಾಣ ಮಾಡಲು 220 ಕೋಟಿ ರೂಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಎಪಿಎಂಸಿಯಲ್ಲಿ ಈ ಹಿಂದೆ ವಿಧಿಸುತ್ತಿದ್ದ ಶೇಕಡ 1.5 ರಷ್ಟು ಮಾರುಕಟ್ಟೆ ಶುಲ್ಕವನ್ನು ಶೇ 1ಕ್ಕೆ ಇಳಿಸಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಒಬ್ಬ ಸದಸ್ಯರ ಹುದ್ದೆ ತೆರವಾಗುತ್ತಿದ್ದು ಅದನ್ನು ತುಂಬಲು ಮುಖ್ಯಮಂತ್ರಿಗಳಿಗೆ ಅಧಿಕಾರ ನೀಡಲಾಗಿದೆ.

ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಪೀಠೋಪಕರಣ ಖರೀದಿಗೆ 12.8 ಕೋಟಿ ಅನುದಾನ ಮಂಜೂರು ಮಾಡಲಾಗಿದೆ ಎಂದರು. ಕರ್ನಾಟಕ ಲೋಕಾಯುಕ್ತ ಆಯಕ್ಟ್ ತಿದ್ದುಪಡಿ ತರಲಾಗಿದೆ. 90 ದಿನದಲ್ಲಿ ಯಾವುದೇ ಪ್ರಕರಣ ದಾಖಲಾದ್ರೂ ಬಗೆಹರಿಸಬೇಕು. ಬಿ-ರಿಪೋರ್ಟ್ 6 ತಿಂಗಳಲ್ಲಿ ಸಲ್ಲಿಸಬೇಕು ಎಂದು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

## ಕೋವಿಡ್–19 ರ ಪರಿಣಾಮ – ಕರ್ನಾಟಕದ ಅರ್ಥ ವ್ಯವಸ್ಥೆಯ ಪುನರ್ ಜೀವನಕ್ಕಾಗಿ ಚರ್ಚೆ

ಬೆಂಗಳೂರು 09 ಜುಲೈ (ಕರ್ನಾಟಕ ವಾರ್ತೆ) :

ಕೋವಿಡ್–19 ಕೊರೋನ ವೈರಸ್‌ನಿಂದ ಜನರ ಆರೋಗ್ಯದ ಜೊತೆಗೆ ಕರ್ನಾಟಕದ ಅರ್ಥ ವ್ಯವಸ್ಥೆಯ ಮೇಲೆ ಆದ ಪರಿಣ್ಮಾ ಹಾಗೂ ಕುಸಿದು ಬೀಳುತ್ತಿರುವ ಅರ್ಥ ವ್ಯವಸ್ಥೆಯ ಪನರ್ ಜೀವನಕ್ಕಾಗಿ ಸೂಕ್ತ ಪರ್ಯಾಯ ಕಂಡು ಹಿಡಿಯುವುದು ಮತ್ತು ಜನರ ಜೀವನ ಹಾಗೂ ಜೀವನೋಪಾಯದ ನಡುವೆ ವಿವಿಧ ವಲಯಗಳ ಅಭಿವೃದ್ಧಿ ಮೇಲೆ ಆದ ಪರಿಣಾಮ ಹಾಗೂ ಪರಿಹಾರ ಕುರಿತು ಚರ್ಚಿಸಲು ಬಿ.ಜೆ.ಪುಟ್ಟಸ್ವಾಮಿ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಯೋಜನಾ ಮಂಡಳಿಯವರ ಅಧ್ಯಕ್ಷತೆಯಲ್ಲಿ ಹಾಗೂ ಡಾ. ಶಾಲಿನಿ ರಜನೀಶ್, ಭಾ.ಆ.ಸೇ, ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಉಪಸ್ಥಿತಿಯಲ್ಲಿ ವೆಬಿನಾರ್ ವಿಡಯೋ ಸಂವಾದ ಮೂಲಕ ದಿನಾಂಕ: 04/05/2020 ರಿಂದ ದಿನಾಂಕ: 19/06/2020 ರವರಗೆ 19 ಸಭೆಗಳನ್ನು ನಡೆಸಲಾಗಿದೆ.

ಸದರಿ ಸಭೆಗಳಲ್ಲಿ ಹಿರಿಯ ಐ.ಎ.ಎಸ್. ನಿವೃತ್ತ ಅಧಿಕಾರಿಗಳು, ವಿಷಯ ಪರಿಣಿತರು

ಹಾಗೂ ತಜ್ಞರು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಭಾಗವಹಿಸಿರುವರು ಎಂದು ಕರ್ನಾಟಕ ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛಾಯಾಚಿತ್ರ ಲಗತ್ತಿಸಿದೆ)

**ಬೀಳ್ಕೊಡುಗೆ ಸಮಾರಂಭ**

ಬೆಂಗಳೂರು ಜುಲೈ 09 (ಕರ್ನಾಟಕ ವಾರ್ತೆ) :

ಜೂನ್ 2020ರ ಮಾಹೆಯಲ್ಲಿ ನಿವೃತ್ತಿ ಹೊಂದಿರುವ ವಿಧಾನ ಪರಿಷತ್ತಿನ 16 ಶಾಸಕರುಗಳಿಗೆ ಮಾನ್ಯ ಸಭಾಪತಿಗಳ ಅಧ್ಯಕ್ಷತೆಯಲ್ಲಿ, ದಿನಾಂಕ: 10–07–2020ರಂದು ಬೆಳಿಗ್ಗೆ 10–30 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂ 334ರ ಸಮ್ಮೇಳನಾ ಸಭಾಂಗಣದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

**ದತ್ತು ಸ್ವೀಕಾರ**

ಬೆಂಗಳೂರು 09 ಜುಲೈ(ಕರ್ನಾಟಕ ವಾರ್ತೆ)

ಬಿ. ಮೀನಾ ಅಪ್ಪಾಚು, ಮೈಸೂರು ರವರು ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿನ ಚಿರತೆ, ಕಾಳಿಂಗ ಸರ್ಪ ಮತ್ತು ಲವ್ ಬರ್ಡ್‌ಗಳನ್ನು ಜುಲೈ 06, 2020 ರಿಂದ ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು 09 ಜುಲೈ(ಕರ್ನಾಟಕ ವಾರ್ತೆ)

ವಸತಿ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ಕೊಡಗು ಜಿಲ್ಲೆಯಲ್ಲಿ ಜುಲೈ 10 ರಂದು ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.